ಇ) ಕೆಲವು ಗಿರಿಜನ ಪಂಗಡಗಳು ಅನಾಧಿಕಾಲದಿಂದಲೂ ಕಾಡಿನೊಳಗೆ ಜೀವಿಸುತ್ತಿದ್ದಾರೆ. ಅರಣ್ಯ ಸಂರಕ್ಷಣಾ ಕಾಯ್ದೆಯ ವಿಧಿಗಳ ಕಾರಣದಿಂದ ಈ ಗಿರಿಜನರಿಗೆ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ.

ಈ) ವನ್ಯಜೀವಿ ಅಭಯಾರಣ್ಯಗಳಲ್ಲಿ ವಾಸಿಸುತ್ತಿರುವ ಗಿರಿಜನರನ್ನು ರಾಷ್ಟ್ರೀಯ ಉದ್ಯಾನ ಪ್ರದೇಶಗಳಿಂದ ಹೊರತರಬೇಕಾಗುತ್ತದೆ.

ಉ) ಅರಣ್ಯದೊಳಗೆ ಮತ್ತು ಅರಣ್ಯದ ಅಂಚಿನಲ್ಲಿ ವಾಸಿಸುವ ಗಿರಿಜನರು ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಮತ್ತು ಮಾರಾಟದಿಂದ ಜೀವನ ನಿರ್ವಹಿಸುತ್ತಿರುತ್ತಾರೆ. ಕೆಲವು ಗಿರಿಜನರು, ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದು, ಕೆಲವರು ಸರ್ಕಾರದಿಂದ ನೀಡಿದ ಜಮೀನುಗಳಲ್ಲಿ ಕೃಷಿಯನ್ನವಲಂಭಿಸಿ ಜೀವನ ನಿರ್ವಹಿಸುತ್ತಿರುತ್ತಾರೆ. ಇದಲ್ಲದೇ ಸರ್ಕಾರದಿಂದ ನೀಡಲಾಗುವ ವಿವಿಧ ಸೌಲಭ್ಯಗಳ ಸದುಪಯೋಗ ಪಡೆದುಕೊಂಡು ಸ್ವಯಂ ಉದ್ಯೋಗ ಹೈನುಗಾರಿಕೆ ಇತ್ಯಾದಿ ವೃತ್ತಗಳನ್ನು ನಿರ್ವಹಿಸುತ್ತಿರುತ್ತಾರೆ. ಕಾಡಿನಿಂದ ಹೊರಬಂದ ಗಿರಿಜನರನ್ನು ಪುನರ್‌ವಸತಿಗೊಳಿಸಿ ಅವರಿಗೆ ನಾಗರೀಕ ಸೌಲಭ್ಯಗಳಾದ ಮನೆ, ಕುಡಿಯುವ ನೀರು, ಭೂಮಿ, ನೀರಾವರಿ ಶಿಕ್ಷಣ ಮತ್ತು ವೃತ್ತಿ ಪರ ತರಬೇತಿಗಳನ್ನು ನೀಡಿ ಅವರನ್ನು ಮುಖ್ಯವಾಹಿನಿಗೆ ತರಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ತುರುವೇಕೆರೆ ತಾಲ್ಲೂಕಿನ ಕಬ್ಬು ಬೆಳೆಗಾರರ ಕುರಿತು

618(1004) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಹೆಚ್ಚು ಕಬ್ಬು ಬೆಳೆಗಾರರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹೇಮಾವತಿ ನೀರು ಬಂದ ಮೇಲೆ ಎಲ್ಲಾ ರೈತರು ಕಬ್ಬು ಬೆಳೆಯುತ್ತಿರುವುದು ನಿಜವೆ?

ಇ) ಹಾಗಿದ್ದಲ್ಲಿ, ಗ್ರಾಮೀಣ ಜನತೆಗೆ ಅನುಕೂಲವಾಗಲು ಸಕ್ಕರೆ ಕಾರ್ಖಾನೆ ಹೊಸದಾಗಿ ಸ್ಥಾಪಿಸಲು ಸರ್ಕಾರ ಯೋಚಿಸಿದೆಯೆ?

ಈ) ಹಾಗಿದ್ದಲ್ಲಿ ಈ ವರ್ಷ ಹೊಸ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಲಾಗುವುದೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ. ಇಲ್ಲ.

ಆ) ತುಮಕೂರು ಜಿಲ್ಲೆಯಲ್ಲಿ ಕಳೆದ ವರ್ಷ ಒಟ್ಟಾರೆಯಾಗಿ 1.72 ಲಕ್ಷ ಮೆ.ಟನ್ ಕಬ್ಬು ಬೆಳೆದಿರುತ್ತಾರೆ. ಇದರಲ್ಲಿ ಅಲ್ಪ ಪ್ರಮಾಣದ ಕಬ್ಬನ್ನು ತುರುವೇಕೆರೆ ತಾಲ್ಲೂಕಿನ ಕೆಲವು ರೈತರು ಬೆಳೆದಿರುತ್ತಾರೆ.

ಇ) ಇಲ್ಲ.

ಈ. ಯಾವುದೇ ಪ್ರದೇಶದಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು, ಕನಿಷ್ಠ 5.00

ಲಕ್ಷ ಮೆ.ಟನ್ ಕಬ್ಬಿನ ಅವಶ್ಯಕತೆ ಇರುತ್ತದೆ. ಇಡೀ ತುಮಕೂರು ಜಿಲ್ಲೆಯಲ್ಲಿ 1.72 ಲಕ್ಷ ಮೆ.ಟನ್‌ನಷ್ಟು ಕಬ್ಬು ಮಾತ್ರ ಉತ್ಪಾದನೆಯಾಗುತ್ತಿದ್ದು, ಜಿಲ್ಲೆಯಲ್ಲಿ ಸದ್ಯಕ್ಕೆ ಹೊಸ ಸಕ್ಕರೆ ಕಾರ್ಖಾನೆಯ ಸ್ಥಾಪನೆಗೆ ಅವಕಾಶವಿರುವುದಿಲ್ಲ.

ತುರುವೇಕೆರೆ ತಾಲ್ಲೂಕಿನಲ್ಲಿ ಪಶು ಆಸ್ಪತ್ರೆಗಳ ಕುರಿತು

619(1005) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ) (ಅಣ್ಣಯ್ಯ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಆಸತ್ರೆಗಳಿವೆ. ಹಾಗೂ ಯಾವ ಹಳ್ಳಿಗಳಲ್ಲಿ ಇವೆ ಮಾಹಿತಿ ನೀಡುವುದು.

ಆ) ಕೆಲವು ದೂರದ ಹಳ್ಳಿಗಳಿಗೆ ಆಸ್ಪತ್ರೆ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಇನ್ನು ಎಷ್ಟು ಗ್ರಾಮಗಳಿಗೆ ಪಶು ಆಸ್ಪತ್ರೆ ಬೇಕಾಗಿದೆ (ಗ್ರಾಮಗಳ ವಿವರ ನೀಡುವುದು)

ಈ) ಇವುಗಳನ್ನು ಯಾವಾಗ ಮಂಜೂರು ಮಾಡಲಾಗುವುದು.

ಉ) ಈ ವರ್ಷದ ಆಯವ್ಯಯದಲ್ಲಿ ಮಂಜೂರು ಮಾಡಲಾಗುವುದೆ?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) 2 ಪಶು ಆಸ್ಪತ್ರೆಗಳು - ತುರುವೇಕೆರೆ - ಮಾಯಸಂದ್ರ

ಆ) ಬಂದಿರುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ತುರುವೇಕೆರೆ ತಾಲ್ಲೂಕಿನ ಮಸೀದಿಗಳಿಗೆ ಹಣ ಬಿಡುಗಡೆ

620(1006) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ) (ಅಣ್ಣಯ್ಯ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಎಷ್ಟು ಮಸೀದಿಗಳಿವೆ?

ಆ) ಮಸೀದಿಗಳ ಜೀರ್ಣೋದ್ಧಾರಕ್ಕೆ ಸರ್ಕಾರಿ ಸವಲತ್ತು ಪಡೆಯಲು ಎಷ್ಟು ಅರ್ಜಿ ಬಂದಿವೆ?

ಇ) ಈ ವರ್ಷ ಎಷ್ಟು ಮಸೀದಿಗಳಿಗೆ ಹಣ ಮಂಜೂರು ಮಾಡಲಾಗಿದೆ? ಅವು ಯಾವುವು? ಹಾಗೂ ಎಷ್ಟು ಹಣ ಮಂಜೂರು ಮಾಡಲಾಗಿದೆ (ವಿವರ ನೀಡುವುದು)